|| ಶ್ರೀ ||

ಹರಿಸರ್ವೋತ್ತಮ ವಾಯುಜೀವೋತ್ತಮ ಶ್ರೀಮನ್ ಮೂಲರಾಮೋ ವಿಜಯತೇ :

ಶ್ರೀ ಜಿತಾಮಿತ್ರ ಗುರುಭ್ಯೋ ನಮಃ

ಶ್ರೀ ಗುರುರಾಜೋ ವಿಜಯತೇ

# ಶ್ರೀ ಜಿತಾಮಿತ್ರ ತೀರ್ಥರು

ಶ್ರೀಮನ್ ಮಧ್ವಾಚಾರ್ಯರ ಪರಂಪರೆಯಲ್ಲಿ ಮಧ್ವಾಚಾರ್ಯರಿಂದ ಹನ್ನೊಂದನೇ ಯತಿಗಳಾಗಿ ಹಾಗೂ ಶ್ರೀರಾಮಚಂದ್ರ ತೀರ್ಥರ ಪರಮ ಶಿಷ್ಯರಾದ ಶ್ರೀ ವಿಭುದೇಂದ್ರ ತೀರ್ಥರ ಕರಕಮಲ ಸಂಜಾತರಾದ ಯತಿಪುರುಷರು ಶ್ರೀ ಜಿತಾಮಿತ್ರ ತೀರ್ಥರು. ಇವರು ಪೂರ್ವಾಶ್ರಮದಲ್ಲಿಯೇ ಶ್ರೀ ವಿಭುದೇಂದ್ರ ತೀರ್ಥರು ನೀಡಿದ ನಾರಸಿಂಹ ಸಾಲಿಗ್ರಾಮಕ್ಕೆ ಗುರುಗಳ ಸಮ್ಮುಖದಲ್ಲಿಯೇ ಪ್ರತ್ಯಕ್ಷವಾಗಿ ನೈವೇದ್ಯ ಉಣಿಸಿದ ರುದ್ರಾಂಶ ಸಂಭೂತರೆಂದು ಖ್ಯಾತಿಗೊಂಡ ಮಹಾ ಯೋಗಿಗಳಿವರು. ಮತ್ತು ಶ್ರೀಪಾದ ರಾಜರ ಸಮಕಾಲೀನರು. ಕೃಷ್ಣ ಭೀಮೆಯರ ಸಂಗಮ ಸ್ಥಳದಲ್ಲಿ ತಪೋನಿಷ್ಠರಾಗಿ ಇಂದಿಗೂ ಭಕ್ತರನ್ನು ಅನುಗ್ರಹಿಸುತ್ತಿರುವ ಮಹಾನ್ ಯತಿವರೇಣ್ಯರು. ಹಾಗೂ ಜ್ಞಾನ, ಭಕ್ತಿ ವೈರಾಗ್ಯ ಪ್ರದಾತರು.

## ಶ್ರೀ ಜಿತಾಮಿತ್ರ ಗಡ್ಡೆ

ಸುಮಾರು 500 ವರ್ಷಗಳ ಹಿಂದೆ ಶ್ರೀ ಜಿತಾಮಿತ್ರರು ತಮ್ಮ ಕರಕಮಲ ಸಂಜಾತರಾದ ಯತಿಶ್ರೇಷ್ಠರಾದ ಶ್ರೀ ರಘುನಂದನ ತೀರ್ಥರಾದಿಯಾಗಿ (ಹಂಪೆ) ಅನೇಕ ಶಿಷ್ಯಂದಿರಿಗೆ ಸುಧಾದಿ ಗ್ರಂಥಗಳ ಭೋದನೆ ಮಾಡಿದ ಪುಣ್ಯಸ್ಥಳ ಶ್ರೀ ಜಿತಾಮಿತ್ರ ಗಡ್ಡೆ. ಶ್ರೀ ಜಿತಾಮಿತ್ರರು ಸತತ ಏಳು ದಿವಸಗಳ ಕಾಲ ಕೃಷ್ಣೆ ಮತ್ತು ಭೀಮಾ ನದಿಗಳ ಭೀಕರ ಪ್ರವಾಹದ ಮಧ್ಯೆ ತಪೋನಿಷ್ಠರಾಗಿ ಮಾರನೇ ದಿನ ಅವರ ಪೂರ್ವಾಶ್ರಮದ ಅಕ್ಕ ಹಾಗೂ ಭಕ್ತ ವೃಂದಕ್ಕೆ ಕಾಣಿಸಿಕೊಂಡು ಮುಂದೆ ತಾವು ಗೋನದ (ಜ್ಞಾನದ)ವೃಕ್ಷದ ರೂಪದಲ್ಲಿ ಇಲ್ಲಿಯೇ ಇರುತ್ತೇವೆ ಎಂದು ಹೇಳಿ ಅದೃಶ್ಯರಾದ ಪುಣ್ಯಸ್ಥಳ.

ಇಂದಿಗೂ ಗೋನದ (ಜ್ಞಾನದ)ವೃಕ್ಷದ ರೂಪದಲ್ಲಿ ನೆಲಸಿ ಪ್ರತಿ ವರ್ಷ ಮಾರ್ಗಶಿರ ಅಮಾವಾಸ್ಯೆಯಂದು ಅವರ ಪೂರ್ವಾಶ್ರಮದ ವಂಶಸ್ಥರಿಂದ ವೈಭವಯುತವಾಗಿ, ಸಾವಿರಾರು ಭಕ್ತ ಸಮೂಹದೊಂದಿಗೆ ಆರಾಧನಾ ಮಹೋತ್ಸವ ಸೇವೆ ಕೈಗೊಳ್ಳುತ್ತಾ ಭಕ್ತರನ್ನು ಉದ್ಧರಿಸುತ್ತಿರುವರು.

ರಾಯಚೂರಿನಿಂದ ಕೇವಲ 30 ಕಿ.ಮೀ. (ಶಕ್ತಿನಗರ - ಕಾಡ್ಲೂರು ಮಾರ್ಗವಾಗಿ) ದೂರವಿದ್ದರೂ ಕೃಷ್ಣ ಮತ್ತು ಭೀಮಾ ನದಿಗಳು ಆವೃತ್ತಗೊಂಡು ಶ್ವೇತ ದ್ವೀಪ ಸದೃಶದಂತೆ ನಡುಗಡ್ಡೆ ಯಾಗಿರುವುದರಿಂದ ಈ ಕ್ಷೇತ್ರದ ದರ್ಶನ ಕಷ್ಟಸಾಧ್ಯ. ಆದರೂ ಅವರ ಆರಾಧನಾ ಮಹೋತ್ಸವದಲ್ಲಿ ಅವರ ಸೇವೆ ಮಾಡಲು ಸಹಸ್ರಾರು ಭಕ್ತರು ಅಲ್ಲಿಗೆ ಬರುವುದು ಜಿತಾಮಿತ್ರ ತಿರ್ಥರ ಮಹಿಮೆಯೇ ಸರಿ. ಶ್ರೀ ಜಿತಾಮಿತ್ರರ ಪೂರ್ವಾಶ್ರಮದ ಮನೆ ಗುಲ್ಬರ್ಗಾ ಜಿಲ್ಲೆಯ ಶಹಾಪೂರ ತಾಲೂಕಿನ ಚಿಕ್ಕಗ್ರಾಮ "ಶಿವಪುರ" ದಲ್ಲಿದ್ದು ಅಲ್ಲಿ ಅವರ ವಂಶೀಕರು ಇಂದಿಗೂ ವಾಸವಾಗಿದ್ದಾರೆ.

ಪ್ರತಿ ಮಳೆಗಾಲದ ನದಿ ಪ್ರವಾಹದ ಕೊರೆತದಿಂದ ಐತಿಹಾಸಿಕ ಪುಣ್ಯಸ್ಥಳವಾದ ಈ ನಡುಗಡ್ಡೆ ದಿನೇ ದಿನೇ ಕೊಚ್ಚಿಕೊಂಡು ಅಲ್ಲಿ ಪೂಜೆಗೊಳ್ಳುವ ಶ್ರೀ ಜಿತಾಮಿತ್ರ ತೀರ್ಥರ ಗೋನದ ವೃಕ್ಷ ನೀರು ಪಾಲಾಗುವುದೆಂಬ ಆತಂಕ ಭಕ್ತ ಸಮೂಹದಲ್ಲಿ ಹೆಚ್ಚುತ್ತಿದ್ದು, ಈ ದುರಂತವನ್ನು ತಪ್ಪಿಸುವ ನಿಟ್ಟಿನಲ್ಲಿ ಕಳೆದ ಎರಡು ವರ್ಷಗಳ ಹಿಂದೆ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಪ್ರಸುತ್ತ

ಪೀಠಾಧಿಪತಿಗಳಾದ ಶ್ರೀ ಶ್ರೀ 108 ಶ್ರೀ ಸುಶಮೀಂದ್ರ ತೀರ್ಥ ಶ್ರೀ ಪಾದಂಗಳವರ ಆಜ್ಞೆ ಹಾಗೂ ಅನುಗ್ರಹದಿಂದ ಸುಮಾರು ಹದಿಮೂರು ಲಕ್ಷ ರೂಪಾಯಿಗಳ (ರೂ.13,00000-00) ವೆಚ್ಚದಲ್ಲಿ ನಡುಗಡ್ಡೆಯ ಬಲಭಾಗದಲ್ಲಿ ಬೃಹತ್ ರಕ್ಷಣಾ ಗೋಡೆಯನ್ನು ನಿರ್ಮಿಸಿ ಒಂದು ಭಾಗದ ನೀರಿನ ಕೊರೆತವನ್ನು ತಪ್ಪಿಸಲಾಗಿದೆ. ಆದರೆ ಇತ್ತೀಚೆಗೆ ಆದ ಅತಿವೃಷ್ಠಿಗಳಿಂದಾಗಿ ನದಿ ಪ್ರವಾಹದ ಭೀಕರತೆ ಹೆಚ್ಚಾಗಿದ್ದು ನಡುಗಡ್ಡೆಯ ಎಡಪಾರ್ಶ್ವವು ನದಿ ಕೊರೆತಕ್ಕೆ ಈಡಾಗುತ್ತಿದೆ. ಈ ದುರಂತವನ್ನೂ ತಪ್ಪಿಸಿ ಈ ಮಹಾ ಕ್ಷೇತ್ರ ಸ್ಥಳವನ್ನು ಶಾಶ್ವತವಾಗಿ ಉಳಿಸಿಕೊಳ್ಳುವುದಕ್ಕಾಗಿ ಎಡಭಾಗದಲ್ಲಿಯೂ ಕೂಡ ರಕ್ಷಣಾ ಗೋಡೆ ನಿರ್ಮಿಸಲೇ ಬೇಕಾದ ಅನಿವಾರ್ಯತೆ ಬಂದಿದೆ. ಐತಿಹಾಸಿಕವಾದ, ಅತ್ಯಂತ ಪವಿತ್ರವಾದ ಈ ಸ್ಥಳದ ರಕ್ಷಣಾ ಕಾರ್ಯಕ್ಕೆ ಭಕ್ತ ಸಮೂಹದಿಂದ, ಭಕ್ತಿಪುರತ್ಸರವಾದ ದೇಣಿಗೆಯನ್ನು, ಧನ ಸಹಾಯವನ್ನು ಈ ಮಹತ್ ಕಾರ್ಯಕ್ಕೆ ಅಪೇಕ್ಷಿಸಲಾಗಿದೆ.

## ಅಂದಾಜು ವೆಚ್ಚ

ಈ ಕಾರ್ಯಯೋಜನೆಯ ಅಂದಾಜು ವೆಚ್ಚ ಹಾಗೂ ಯೋಜನೆಯ ನೀಲನಕ್ಷೆ ತಯಾರಿಸಲಾಗಿದ್ದು ಅದನ್ನು ತಮ್ಮ ಗಮನಕ್ಕಾಗಿ ನೀಡಲಾಗಿದೆ. ಅಂದಾಜು ವೆಚ್ಚ ಸುಮಾರು ರೂ. 25 ಲಕ್ಷ ಕ್ಕಿಂತಲೂ ಹೆಚ್ಚು ಆಗಬಹುದೆಂದು ಸಿವಿಲ್ ಇಂಜಿನೀಯರುಗಳು ತಿಳಿಸಿದ್ದಾರೆ.

ಮೇಲೆ ತಿಳಿಸಿದ ಬೃಹತ್ ಯೋಜನೆಗೆ ಸಂಪನ್ಮೂಲ (ಹಣ, ಸಾಮಾಗ್ರಿ, ಇತ್ಯಾದಿ) ಸಂಗ್ರಹಿಸಲು ಪರಮ ಪೂಜ್ಯ ಶ್ರೀ 108 ಶ್ರೀ ಸುಶಮಿಂದ್ರ ತೀರ್ಥ ಶ್ರೀ ಪಾದಂಗಳವರ ಆಜ್ಞೆಯಂತೆ "ಶ್ರೀ ಜಿತಾಮಿತ್ರ ಗಡ್ಡೆ ಜೀರ್ಣೋದ್ಧಾರ ಸಮಿತಿ"ಯನ್ನು ರಚಿಸಲಾಗಿದ್ದು ಈ ಸಮಿತಿಯಲ್ಲಿ ಅನುಭವಿ ಇಂಜಿನೀಯರುಗಳು, ಸಾಮಾಜದ ಮುಖಂಡರು, ದಾನಿಗಳು, ಭಕ್ತರು ಇರುತ್ತಾರೆ.

ಈ ಸತ್ಕಾರ್ಯದಲ್ಲಿ ಭಕ್ತ ಮಹಾಜನರು ಕೊಡುಗೈ ದಾನಿಗಳಾಗಿ ಮುಂದೆ ಬಂದು ತಾವು, ತಮ್ಮವರಿಂದ ಧನ ಸಹಾಯ ನೀಡಿ ಶ್ರೀಮದ್ ಜಿತಾಮಿತ್ರ ತೀರ್ಥರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿಸಲಾಗಿದೆ.

ಧನ ಸಹಾಯ ನೀಡುವವರು .................................... ಬ್ಯಾಂಕಿನ .................... ಅಕೌಂಟಿಗೆ ನೀಡಬಹುದು ಅಥವಾ "ಶ್ರೀ ಜಿತಾಮಿತ್ರ ಗಡ್ಡೆ ಜೀರ್ಣೋದ್ಧಾರ ಸಮಿತಿ" ಯ ಹೆಸರಿನಲ್ಲಿ ಚೆಕ್ ಅಥವಾ ಡಿ. ಡಿ. ಯನ್ನು ಕಳಿಸಬಹುದು.